## ಎಮ್ಮೆಯಲ್ಲ ಕಾಡೆಮ್ಮೆ



ನಮ್ಮ ಯಲ್ಲಾಪುರ ಪಟ್ಟಣದ ಕಾಳಮ್ಮ ನಗರದ ಕಾಶಿ ಮಾತಿನ ರೈಲು ಬಿಟ್ಟನೆಂದರೆ ನಿಜವಾದ ರೈಲೂ ಕೂಡ ಬದಿಗೆ ಸರಿಯಲೇಬೇಕು. ಅವನು ವೃತ್ತಿಯಿಂದ ನಾಲ್ಕಾರು ಎಮ್ಮೆಗಳನ್ನು ಸಾಕಿ ಹಾಲು ಮಾರಿ ಜೀವನ ಸಾಗಿಸುವವ.

ಒಂದು ರಾತ್ರಿ ಮೇಯಲು ಬಿಟ್ಟ ಒಂದು ಎಮ್ಮೆ ಕೊಟ್ಟಿಗೆಗೆ ತಿರುಗಿ ಬರಲಿಲ್ಲವಂತೆ. ಹೆಂಡತಿಗೆ ಹೇಳಿ ಕಾಶಿ ಎಮ್ಮೆ ಹುಡುಕಲು ಕಾಡಿಗೆ ಹೋದ. ಅಂತೂ ಎಮ್ಮೆ ಕಾಡಲ್ಲಿ ಸಿಕ್ಕಿತು. ಅದನ್ನು ದಾಂಬಿ(ದನಗಳನ್ನು ಕಟ್ಟುವ ಸಾಧನ)ಯಿಂದ ಕಟ್ಟಿ ಕೊಟ್ಟಿಗೆಗೆ ಎಳತಂದು ಕಟ್ಟಿ ಮಲಗಿದನಂತೆ.

ಬೆಳಿಗ್ಗೆ ಕಾಶಿ ಎದ್ದಾಗ ಕೊಟ್ಟಿಗೆಯ ಸುತ್ತಲೂ ಜನವೋಜನ. ಹೆಂಡತಿಯನ್ನು ಕರೆದು ವಿಚಾರಿಸಿದಾಗ ಕಾಶಿಗೆ ಆಶ್ಚರ್ಯವಂತೆ. ರಾತ್ರಿ ಕಾಶಿ ಅವನ ಎಮ್ಮೆಯನ್ನು ಎಳತರುವ ಬದಲು ದೊಡ್ಡದಾದ ಕಾಡೆಮ್ಮೆಯನ್ನು ಎಳತಂದು ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದನಂತೆ! ಅದಕ್ಕೆ ಕೊಟ್ಟಿಗೆಯ ಸುತ್ತ ಜನವೋ ಜನರಂತೆ!

**ಬೀರಣ್ಣ ನಾಯಕ ಮೊಗಟಾ**

## ಅಪ್ಪ ಅಮ್ಮನ ಸಹಾಯ

ನಾನು, ಆರನೇ ತರಗತಿಯ ಮಕ್ಕಳ ಹೋಂವರ್ಕ್ ಪುಸ್ತಕ ನೋಡುತ್ತಿದ್ದೆ. ಕಿಟ್ಟು ಎಂಬ ವಿದ್ಯಾರ್ಥಿ ಬಹಳ ತಪ್ಪುಗಳನ್ನು ಮಾಡಿದ್ದ.

'ಒಬ್ಬನೇ ಒಬ್ಬ ವಿದ್ಯಾರ್ಥಿ, ಇಷ್ಟು ತಪ್ಪುಗಳನ್ನು ಮಾಡಲು ಸಾಧ್ಯವೇ?' ಎಂದು ಅವನನ್ನು ಕೇಳಿದೆ.

'ಇಲ್ಲ ಮೇಡಂ. ಇದು ನಾನೊಬ್ಬನೇ ಮಾಡಿದ ತಪ್ಪಲ್ಲ. ಅಪ್ಪ, ಅಮ್ಮ ಕೂಡ ಹೋಂವರ್ಕ್ ಮಾಡಲು ನನಗೆ ಸಹಾಯ ಮಾಡಿದ್ದಾರೆ!'

**ಪ್ರತಿಮಾ ಪ್ರಮೋದ ಮೋನೆ**

